# ಬಿಲೀವರ್ಸ್ ಈಸ್ಟರ್ನ್ ಚರ್ಚ್

ಮೆಟ್ರೋಪಾಲಿಟನ್ ಕಚೇರಿ, ಸಿನೊಡ್ ಸೆಕ್ರೆಟರಿಯೇಟ್, ಸೇಂಟ್ ಥಾಮಸ್ ಸಮುದಾಯ, ತಿರುವಲ್ಲಾ, ಕೇರಳ, ಭಾರತ.

## ಕುರುಬನ ಪತ್ರ

ಸೆಪ್ಟೆಂಬರ್/ಅಕ್ಟೋಬರ್ 2023

ಸಭೆಯ ಎಲ್ಲಾ ಆರ್ಚ್‌ಬಿಷಪ್‌ರವರಿಗೂ, ಬಿಷಪ್‌ರವರಿಗೂ, ಘನ ಬೋಧಕರಿಗೂ, ಡೀಕನ್ ಫಾದರ್ಸ್ ರವರಿಗೂ, ಸುವಾರ್ತಿಕರಿಗೂ, ಆರ್ಡರ್ ಆಫ್ ಸಿಸ್ಟರ್ಸ್ ರವರಿಗೂ ಮತ್ತು ಜಗತ್ತಿನಾದ್ಯಂತ ಹರಡಿಕೊಂಡಿರುವ ಬಿಲೀವರ್ಸ್ ಈಸ್ಟರ್ನ್ ಚರ್ಚ್‌ನ ನಮ್ಮ ಎಲ್ಲಾ ವಿಶ್ವಾಸಿಗಳಿಗೆ ಪಿತಾ, ಪುತ್ರ, ಪವಿತ್ರಾತ್ಮನ ಹೆಸರಿನಲ್ಲಿ ಆಶೀರ್ವಾದಗಳು ಮತ್ತು ಶುಭಾಶಯಗಳು. ಆಮೆನ್! +

ಕ್ರಿಸ್ತನಲ್ಲಿ ಪ್ರಿಯರೇ,

ರೂಪಾಂತರದ ಸಮಯದಲ್ಲಿ, ನಮ್ಮ ಆರ್ಥೊಡಾಕ್ಸ್ ಕ್ರೈಸ್ತರ ಜೀವನದ ಗುರಿಯು ಏನಂದರೆ, “ನಾವು ದೇವರ ದೈವಿಕ ಸ್ವರೂಪಕ್ಕೆ ಹೆಚ್ಚು ರೂಪಾಂತರಗೊಳ್ಳಬೇಕು” ಎಂಬುದನ್ನು ನಮಗೆ ಜ್ಞಾಪಕಮಾಡಲಾಗುತ್ತಿದೆ (2 ಕೊರಿ. 3:18), ಇದು ನಮ್ಮ ಜೀವಿತದಲ್ಲಿ ಸಂಭವಿಸಬೇಕೆಂದರೆ, ಪಶ್ಚಾತ್ತಾಪವು ಅತ್ಯಗತ್ಯವಾಗಿದೆ. . . ಆದ್ದರಿಂದ ಈ ತಿಂಗಳು ನಾವು, ಪಶ್ಚಾತ್ತಾಪದ ವಿಷಯಗಳಲ್ಲಿ ಹೆಚ್ಚು ಜಾಗ್ರತೆಯಿಂದ ದೃಷ್ಟಿಹಾಯಿಸೋಣ.

### 1. ಪಶ್ಚಾತ್ತಾಪ ನಿರಂತರವಾಗಿದೆ.

ಸಭೆಯ ಪ್ರಸಿದ್ಧ ಸಂತರೊಬ್ಬರು ಹೀಗೆ ಹೇಳಿದ್ದಾರೆ, **“ಜೀವಿಸುವುದಕ್ಕಾಗಿ ಕೇವಲ ಎರಡು ಮಾರ್ಗಗಳಿವೆ: ನಾವು ಪಾಪ ಮಾಡಬಾರದು ಅಥವಾ ಪಾಪ ಮಾಡಿದರೆ ಪಶ್ಚಾತ್ತಾಪ ಪಡಬೇಕು! ಮೋಕ್ಷಕ್ಕೆ ಇದೊಂದೇ ದಾರಿ.”**

ಮತ್ತು ನಮ್ಮಲ್ಲಿ ಪಾಪ ಮಾಡದೆ ಯಾರಿಂದಲೂ ಇರುವುದಕ್ಕಾಗದ ಕಾರಣ, ಪ್ರತಿಯೊಬ್ಬರೂ ನಿರಂತರವಾಗಿ ಪಶ್ಚಾತ್ತಾಪ ಪಡಬೇಕು. ಪಶ್ಚಾತ್ತಾಪವು ನಮ್ಮ ಹಳೆಯ ಮಾರ್ಗಗಳನ್ನು ಬಿಟ್ಟು ಕ್ರಿಸ್ತನ ಮಾರ್ಗಗಳನ್ನು ಅಳವಡಿಸಿಕೊಳ್ಳುವ ನಮ್ಮ ಇಚ್ಛೆಯನ್ನು ಬಯಸುತ್ತದೆ ಮತ್ತು ಪವಿತ್ರಾತ್ಮನು ನಮಗೆ ತೋರಿಸಿದಂತೆ, ನಾವು ಬದಲಾಗಬೇಕು. ಅದಕ್ಕಾಗಿಯೇ ಆದಿಸಭೆಯ ಪಿತಾಮಹರು “ಕರ್ತನಾದ ಯೇಸುವೇ, ದೇವರ ಮಗನೇ, ಪಾಪಿಯಾದ ನನ್ನನ್ನು ಕರುಣಿಸು” ಎಂಬ ಯೇಸುವಿನ ಪ್ರಾರ್ಥನೆಯನ್ನು ಪುನರಾವರ್ತಿಸಿದರು. ಮತ್ತು ನಾವೂ  ಹಾಗೆ ಪ್ರಾರ್ಥಿಸುವಾಗ, ದೇವರು ನಮ್ಮನ್ನು ಶುದ್ಧೀಕರಿಸುವ ಮೂಲಕ ಪ್ರತಿಕ್ರಿಯಿಸುತ್ತಾನೆ. ಇದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಸಂತ ಯೋಹಾನನು ವಿವರಿಸುತ್ತಾನೆ: "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ, ಆತನು ನಂಬಿಗಸ್ಥನೂ, ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9).

### 2. ಅಪ್ರಾಮಾಣಿಕ ಪಶ್ಚಾತ್ತಾಪವನ್ನು ನಿಲ್ಲಿಸಿ.

ಸ್ನಾನಿಕನಾದ ಯೋಹಾನನ ಕಾಲದಲ್ಲಿ, ಧಾರ್ಮಿಕ ಯಹೂದಿಗಳು ತಮ್ಮ ರಕ್ಷಣೆ ಮತ್ತು ಶಾಶ್ವತ ಭದ್ರತೆಗಾಗಿ ತಾವು ಅಬ್ರಹಾಮನ ವಂಶಸ್ಥರು ಎಂದು ಅವಲಂಬಿಸಿದ್ದರು. ಆದ್ದರಿಂದ, ಅವರ ಪಶ್ಚಾತ್ತಾಪವು ಸಾಮಾನ್ಯವಾಗಿ ಅಪ್ರಾಮಾಣಿಕವಾಗಿತ್ತು. ಸ್ನಾನಿಕನಾದ ಯೋಹಾನನು ಅಲ್ಲಿದ್ದ ಅಬ್ರಹಾಮನ ಸಂತತಿಗೆ ಅಂದರೆ ಇಸ್ರಾಯೇಲ್ಯರಿಗೆ ಒಂದು ಸಂದೇಶವನ್ನು ಕೊಟ್ಟನು:

“ಅಬ್ರಹಾಮನು ನಮಗೆ ಮೂಲಪುರುಷನಲ್ಲವೇ” ಎಂದು ಅಂದು ಕೊಳ್ಳಬೇಡಿ; ಏಕೆಂದರೆ ದೇವರು ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಾನು ನಿಮಗೆ ಹೇಳುತ್ತೇನೆ" (ಸಂತ. ಲೂಕ 3:8). ಕೆಲವೊಮ್ಮೆ ನಾವು ಹಿಂದಿನ ಆಧ್ಯಾತ್ಮಿಕ ಅನುಭವದ ನೆಪಗಳನ್ನು ಸಹ ಉಪಯೋಗಿಸುವುದರಿಂದ, ನಿರಂತರ ಪಶ್ಚಾತ್ತಾಪದ ಪ್ರಾಮುಖ್ಯತೆಯನ್ನು ನಿರ್ಲಕ್ಷಿಸುತ್ತೇವೆ ಮತ್ತು ನಮ್ಮಲ್ಲಿರುವ ಕ್ರಿಸ್ತೇತರ ವರ್ತನೆಗೆ ಕುರುಡರಾಗುತ್ತೇವೆ.

ಇದರ ನಿಮಿತ್ತ, ನಾವು ನಮ್ಮ ಜೀವನದ ಹಲವು ಕ್ಷೇತ್ರಗಳಲ್ಲಿ ಆಧ್ಯಾತ್ಮಿಕವಾಗಿ ಬೆಳೆಯಲು ವಿಫಲರಾಗುತ್ತೇವೆ; ನಮಗಾಗಿ ದೇವರ ಯೋಜನೆಗಳು ನೆರವೇರುವುದಿಲ್ಲ; ದೇವರು ನಮಗೆ ನೀಡಲು ಬಯಸುತ್ತಿರುವ ಅನೇಕ ಪ್ರತಿಫಲಗಳನ್ನು ನಾವು ಕಳೆದುಕೊಳ್ಳುತ್ತೇವೆ; ಮತ್ತು ನಾವು ಈ ಜಗತ್ತಿನಲ್ಲಿ ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ನಾವು ಪ್ರತಿನಿಧಿಸಬೇಕಾದ ರೀತಿಯಲ್ಲಿ ಪ್ರತಿನಿಧಿಸಲು ವಿಫಲರಾಗುತ್ತೇವೆ.

**3. ನಿಜವಾದ ಪಶ್ಚಾತ್ತಾಪ: “ಹಳೆಯ ಮಾರ್ಗಗಳು” ಕ್ರಿಸ್ತನ ಜೀವನದಿಂದ ಬದಲಾಗಿವೆ.**

ಸುಳ್ಳು ಸುದ್ದಿಯನ್ನು ಹರಡುವುದು, ಅಸೂಯೆ, ಸೋಮಾರಿತನ, ದೂರುವುದು, ಇತರರನ್ನು ಟೀಕಿಸುವುದು, ಅಪ್ರಾಮಾಣಿಕತೆ, ಅವಿಧೇಯತೆ, ಅನೈತಿಕತೆ, ಕ್ಷಮಿಸದಿರುವುದು, ಸ್ವಾರ್ಥ, ಒಪ್ಪಿಸಿಕೊಡದಿರುವಿಕೆ, ತಿರುಗಿ ಬೀಳುವುದು, ದುರಾಶೆ, ಹಿಮ್ಮೆಟ್ಟುವಿಕೆ ಅಥವಾ ಕಪಟತನ? ಹೀಗೆ ಬಹುಶಃ ನಿಮ್ಮ "ಹಳೆಯ ಮಾರ್ಗಗಳು" ಈ ಪಟ್ಟಿಯಲ್ಲಿ ಇಲ್ಲದಿರಬಹುದು; ಆದರೆ ಅವುಗಳು ಏನೆಂದು ನಿಮಗೆ ತಿಳಿದಿದೆ.

ನಿಜವಾಗಿ ಪಶ್ಚಾತ್ತಾಪ ಪಡುವ ನಿರ್ಧಾರವನ್ನು ಮಾಡಿ ಮತ್ತು ಈ ಅಕ್ರೈಸ್ತ ಮಾರ್ಗಗಳನ್ನು ತೆಗೆದುಹಾಕಿರಿ. ಸಂತ ಪೌಲನು ಬರೆದಿರುವಂತೆ, ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳಿರಿ; ಆದ್ದರಿಂದ ನಾವು ಕತ್ತಲೆಯ ಕಾರ್ಯಗಳನ್ನು ಬದಿಗಿಟ್ಟು ಕರ್ತನಾದ ಯೇಸು ಕ್ರಿಸ್ತನನ್ನು ಧರಿಸೋಣ. (ರೋಮ 13:12, 14), ಆದ್ದರಿಂದ ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ತೆಗೆದು ಹಾಕಿಬಿಡಬೇಕು; ..... ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ. (ಎಫೆಸ 4:22, 24).

ಕ್ರಿಸ್ತನಲ್ಲಿ ನನ್ನ ಪ್ರೀತಿಯ ಮಕ್ಕಳೇ, ನೀವು ನನ್ನ ಮಾತನ್ನು ಯಾವಾಗಲು ಕೇಳಿದಂತೆ ಈಗಲೂ ಕೇಳಿರಿ; ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ, ನಾನಿಲ್ಲದಿರುವಾಗಲೂ ಬಹು ಹೆಚ್ಚಾಗಿ ಮನೋ ಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ. (ಫಿಲಿಪ್ಪಿ 2:12)

ಭಾರತದ ಮಣಿಪುರದಲ್ಲಿರುವ ನಮ್ಮ ಸಹೋದರ ಸಹೋದರಿಯರಿಗಾಗಿ - ಸುರಕ್ಷತೆ ಮತ್ತು ಶಾಂತಿ ಮರಳಲು ಪ್ರಾರ್ಥಿಸುವುದನ್ನು ಮುಂದುವರಿಸೋಣ.

ಪವಿತ್ರ ಸಭೆಯ ಸೇವೆಯಲ್ಲಿ,
ಕ್ರಿಸ್ತನಲ್ಲಿ ನಿಮ್ಮ ಆತ್ಮೀಕ ತಂದೆ,

ದಿನಾಂಕ: 18 ಆಗಸ್ಟ್ 2023
ಸ್ಥಳ: ಪವಿತ್ರ ಸಿನೊಡ್

ಅಥನೇಷಿಯಸ್ ಯೋಹಾನ್ ಪ್ರಥಮ ಮೆಟ್ರೋಪಾಲಿಟನ್